**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ,**
**ಕೆ.ಆರ್.ನಗರ.**
**ಸಿ.ಸಿ ನಂಃ 587/ 2020**

| | | |
|---|---|---|
| ಸಾಕ್ಷಿಯ ಹೆಸರಃ | ಡಾ. ಅಶೋಕ.ಹೆಚ್.ಎನ್ | ಫ್ರಾಸಾಃ 4 |
| ತಂದೆಯ ಹೆಸರುಃ | ಲೇಟ್ ಹೆಚ್.ಎನ್.ನಿರ್ವಾಣೇಗೌಡ | ಚಾಸಾಃ 7 |
| ವಯಸ್ಸುಃ | 56 ವರ್ಷ | ದಿಃ 21-01-2025 |
| ಉದ್ಯೋಗಃ | ಹಿರಿಯ ತಜ್ಞರು, ಸಮುದಾಯ ಆರೋಗ್ಯ ಕೇಂದ್ರ, ಸಾಲಿಗ್ರಾಮ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಮೈಸೂರು | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನಾನು 01.08.2017 ರಿಂದ ಇಲ್ಲಿಯವರೆಗೆ ನಾನು ಸಾಲಿಗ್ರಾಮದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಹಿರಿಯ ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತೀದ್ದೇನೆ.

1. ದಿ 23.12.2019 ರಂದು ನಾನು ಕರ್ತವ್ಯದಲ್ಲಿದ್ದಾಗ ಸಂಜೆ 5.45 ಗಂಟೆಗೆ ಚಾಸಾಃ1 ರವರು ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಚಾಸಾ 2 ರವರ ಜೊತೆ ಬಂದಿದ್ದು, ಚಾಸಾ 1 ರವರನ್ನು ಪರೀಕ್ಷೆಗೆ ಒಳಪಡಿಸಿದಾಗ ಚಾಸಾ 1 ರವರ ಮೇಲೆ ಈ ಕೆಳಗೆ ಹೇಳಿದಂತ ಗಾಯಗಳು ಕಂಡುಬಂದಿರುತ್ತವೆಃ

ತಲೆಯ ಹಿಂಭಾಗದಲ್ಲಿ 2 x 1/4 ಸೆ.ಮೀ ಆಳದ ಹರಿದ ಗಾಯವಾಗಿತ್ತು. ನನ್ನ ಅಭಿಪ್ರಾಯದ ಪ್ರಕಾರ ಚಾಸಾ1 ರವರಿಗೆ ಆದ ಸದರಿ ಗಾಯಗಳು ಸಾದಾ ಸ್ವರೂಪದ ಗಾಯವಾಗಿರುತ್ತವೆ.

ಚಾಸಾ 1 ರವರನ್ನು ತಪಾಸಣೆ ಮಾಡಿದ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಯು ಚಾಸಾ 1 ರವರ ಗಾಯದ ಪ್ರಮಾಣ ಪತ್ರವನ್ನು ಮತ್ತು ಅದರಲ್ಲಿರುವ

ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಗಾಯ ಪ್ರಮಾಣ ಪತ್ರವನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಸಿ.ಎಸ್ ವಕೀಲರಿಂದಃ**

1. ಮಿರ್ಲೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವಿದೆ ಎಂದರೆ ಸರಿ. ಚಾಸಾ 1 ರವರಿಗೆ ನಾನು ನೀಡಿದ ಚಿಕಿತ್ಸೆಯನ್ನು ಮಿರ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪಡೆಯಬಹುದಾಗಿತ್ತು ಎಂದರೆ ಸರಿ. ಗಾಯಾಳುವಿನ ಗುರುತಿನ ಚಿಹ್ನೆಯನ್ನು ನಿಪಿ.2 ರಲ್ಲಿ ನಮೂದಿಸಿರುವುದಿಲ್ಲ. ಸಾಮಾನ್ಯವಾಗಿ ಯಾವುದಾದರೂ ವ್ಯಕ್ತಿಯು ನಡೆದುಕೊಂಡು ಹೋಗುತ್ತಿದ್ದಾಗ ಗಟ್ಟಿ ನೆಲದ ಮೇಲೆ ಬಿದ್ದು, ತಲೆಗೆ ಕಲ್ಲಿನಿಂದ ಪೆಟ್ಟಾದರೆ ನಿಪಿ.2 ರಲ್ಲಿ ಹೇಳಿರುವಂತಹ ಗಾಯಗಳಾಗುವ ಸಾಧ್ಯತೆ ಇದೆ ಎಂದರೆ ಸರಿಯಲ್ಲ. ಸಾಮಾನ್ಯಾಗಿ ಯಾವುದಾದರೂ ವ್ಯಕ್ತಿಯು ಚೂಪಾದ ಕಲ್ಲಿನ ಮೇಲೆ ಬಿದ್ದರೆ ನಿಪಿ.2 ರಲ್ಲಿ ಹೇಳಿರುವ ಗಾಯಗಳಾಗುವ ಸಾಧ್ಯತೆ ಇದೆ ಎಂದರೆ ಸರಿ. ಸಾಕ್ಷಿಯ ಮುಂದುವರೆದು ಕೇವಲ ನಿಪಿ.2 ರಲ್ಲಿ ಹೇಳಿರುವ ಗಾಯಗಳು ಮಾತ್ರ ಆಗುವುದಿಲ್ಲ ಅದರೆ ಜೊತೆ ತರಚಿದ ಗಾಯಗಳು ಸಹ ಆಗುತ್ತವೆ ಎಂದು ನುಡಿದಿರುತ್ತಾರೆ.

2. ಚಾಸಾ 1 ರವರು ಚಿಕಿತ್ಸೆಗಾಗಿ ನನ್ನ ಬಳಿ ಬಂದಿದ್ದಾಗ ಅವರು ಮದ್ಯಪಾನ ಮಾಡಿದ್ದರು ಎಂದರೆ ಸರಿಯಲ್ಲ. ಚಾಸಾ 1 ರವರು ಮದ್ಯಪಾನ ಮಾಡಿ ಸ್ವತಃ ನಿಪಿ.2 ರಲ್ಲಿ ಹೇಳಿರುವಂತಹ ಗಾಯವನ್ನು ಮಾಡಿಕೊಂಡಿದ್ದರೂ ಸಹ ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರಿಗೆ ಸಹಾಯ ಮಾಡಲು ನಾನು ನಿಪಿ.2 ರ ಸುಳ್ಳು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇರುವುದಿಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು., ಕೆ.ಆರ್.ನಗರ**